<u>ಸಾಕ್ಷಿಯನ್ನು ದಿನಾಂಕಃ**20/6/2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲುಃ ವಾದಿ ಪರ ಶ್ರೀ ಡಿ.ಎನ್.ಹೆಚ್. ವಕೀಲರಿಂದ.**

ನಮ್ಮ ತಂದೆ ತಾಯಿ ತೀರಿ ಹೋಗಿರುತ್ತಾರೆ ಎಂದರೆ ಸರಿ. ನಾವು ಒಟ್ಟು 4 ಜನ ಮಕ್ಕಳು ಎಂದರೆ ಸರಿ. ನಮ್ಮ ಹಿರಿಯ ಅಣ್ಣ ವೇಣುಗೋಪಾಲ ಶಿವಮೊಗ್ಗದಲ್ಲಿ ಬಸ್ ಬುಕ್ಕಿಂಗ್ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾನು ವಾದಿ ಮತ್ತು ನಮ್ಮ ಚಿಕ್ಕಮ್ಮ ಗಿರಿಜಮ್ಮ ರಿಪ್ಪನಪೇಟೆ ಗ್ರಾಮ ಪಂಚಾಯತಿ ಎದುರಿಗೆ ಒಂದು ಬಾಡಿಗೆ ಮನೆಯಲ್ಲಿ ವಾಸ ಇದ್ದೆವು ಎಂದರೆ ಸರಿ. ಬರುವೆ ಗ್ರಾಮದಲ್ಲಿ ಮಹಾಬಲಯ್ಯ ರವರಿಗೆ ಸೇರಿದ ಒಂದು ಮನೆ ಇತ್ತು ಎಂದರೆ ಸರಿ. ಸದರಿ ಮನೆಯಲ್ಲಿ ನಮ್ಮ ಅತ್ತೆ ಗೌರಮ್ಮನ ಮಗ ಅಶೋಕ ಒಂದು ಟೈಪಿಂಗ್ ಮಶೀನ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅಲ್ಲಿ ಟೈಪಿಂಗ್ ಮಶೀನ್ ಇಡಲು ಒಂದು ಪ್ರತ್ಯೇಕ ಕೋಣೆ ಇತ್ತು ಎಂದರೆ ಸರಿ. ನಮ್ಮ ಇನ್ನೊರ್ವ ಅಣ್ಣ ಅಂದರೆ ಪ್ರತಿವಾದಿಯ ತಂದೆ ರಮೇಶ್ ಬೇರೆ ಕಡೆ ಪ್ರತ್ಯೇಕವಾಗಿ ವಾಸ ಇದ್ದರು ಎಂದರೆ ಸಾಕ್ಷಿಯು ಎಲ್ಲಾರು ಒಟ್ಟಿಗೆ ಒಂದೆ ಕಡೆ ವಾಸ ಇದ್ದರು ಎಂದು ಹೇಳುತ್ತಾರೆ. ನಂತರ ಪ್ರತಿವಾದಿಯ ತಂದೆ ಮೂಗುಡ್ತಿ ಗ್ರಾಮದಲ್ಲಿ ಸ್ವಲ್ಪ ದಿನ ವಾಸ ಇದ್ದರು ಎಂದರೆ ಸರಿ. ನನ್ನ ಪ್ರಕಾರ ಮಹಾಬಲಯ್ಯ ರವರಿಗೆ ಮನೆ ಇರಲಿಲ್ಲ, ಖಾಲಿ ಜಾಗ ಇತ್ತು. ಸದರಿ ಜಾಗದ ದಕ್ಷಿಣ ಭಾಗದಲ್ಲಿ ಪ್ರತಿವಾದಿಯ ತಂದೆ ವೇಣುಗೊಪಾಲ ರವರ ಮಗ ಮನುಕುಮಾರ ಮತ್ತು ವಾದಿ ಸುರೇಶ ಖರೀದಿ ಮಾಡಿದ್ದರು ಎಂದರೆ ಸರಿ. ಟೈಪಿಂಗ್ ಮಶೀನ ಇಡುತ್ತಿದ್ದ ಜಾಗವನ್ನೇ ಪ್ರತಿವಾದಿಯ ಹೆಸರಿಗೆ ಕ್ರಯವಾಗಿತ್ತು ಎಂದರೆ ಸರಿ. ಟೈಪಿಂಗ್ ಸೆಂಟರ್ ತೆಗೆದ ನಂತರ ಸದರಿ ಜಾಗದಲ್ಲಿ ಪ್ರತಿವಾದಿಯ ಜಾಗದಲ್ಲಿ ಟೈಲರಿಂಗ್ ಶಾಪ್ ಇಟ್ಟುಕೊಂಡಿದ್ದರು ಎಂದರೆ ಸರಿ. ಮನುಕುಮಾರ್ ಮತ್ತು ವಾದಿ ಸುರೇಶ್ ಕ್ರಯಕ್ಕೆ ತೆಗೆದುಕೊಂಡಿದ್ದ ಜಾಗ

ಮನೆಗಳು ಇದ್ದವು ಎಂದರೆ ಸಾಕ್ಷಿಯು ಮೂರು ಜಾಗದಲ್ಲಿ ಮನೆ ಇತ್ತು ಎಂದು ಹೇಳುತ್ತಾರೆ. ಕ್ರಯಕ್ಕೆ ತೆಗೆದುಕೊಂಡಿದ್ದ ಜಾಗದ ಪಶ್ಚಿಮ ದಿಕ್ಕಿಗೆ ಸರಕಾರಿ ಖಾಲಿ ಜಾಗ ಇತ್ತು ಎಂದರೆ ಸಾಕ್ಷಿಯು ಕಾಲು ದಾರಿ ಇತ್ತು ಎಂದು ಹೇಳುತ್ತಾರೆ. ಪ್ರತಿವಾದಿಯ ತಂದೆ ಕ್ರಯಕ್ಕೆ ತೆಗೆದುಕೊಂಡ ಜಾಗದ ಹಿಂಬದಿಗೆ ಬಾಗಿಲು ಇರಲಿಲ್ಲ ಎಂದರೆ ಸಾಕ್ಷಿಯು ಇತ್ತು ಎಂದು ಹೇಳುತ್ತಾರೆ.

ಪ್ರತಿವಾದಿಯ ತಂದೆ ರಮೇಶ್ ಇನ್ನು ಜೀವಂತ ಇದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಪ್ರತಿವಾದಿಯ ತಂದೆ ತೀರಿಹೋಗಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಅದು ತಪ್ಪಾಗಿದೆ ಎಂದು ಹೇಳುತ್ತಾರೆ. ಮಹಾಬಲಯ್ಯ ರವರ ಜಾಗಕ್ಕು ಮತ್ತು ಗವಟೂರು ಗ್ರಾಮಕ್ಕೂ 3 ಕಿಮೀ ಅಂತರ ಇರಬಹುದು ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಪ್ರತಿವಾದಿ ಮತ್ತು ಅವರ ತಂದೆ ತಾಯಿ ಗವಟೂರು ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.

ಈ ದಾವೆಯು ಯಾವ ಸ್ವತ್ತಿನ ಬಗ್ಗೆ ನಡೆಯುತ್ತಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಒಂದು ಬಾರಿ ಜಾಗದ ಬಗ್ಗೆ ಎಂದು ಹೇಳಿ ಮತ್ತೊಂದು ಬಾರಿ ಮನೆಯ ಬಗ್ಗೆ ಎಂದು ಹೇಳುತ್ತಾರೆ. ನನ್ನ ಮದುವೆ 1983 ರಲ್ಲಿ ಆಗಿದೆ ಎಂದರೆ ಸಾಕ್ಷಿಯು 1984 ರಲ್ಲಿ ಆಗಿದೆ ಎಂದು ಹೇಳುತ್ತಾರೆ. ಬರುವೆ ಗ್ರಾಮದ ಸ.ನಂ-49 ರಲ್ಲಿ ವಾದಿಗೆ 40 ಇಂಟು 80 ಅಡಿ ಜಾಗ ಮಂಜೂರಾಗಿದೆ ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಅ ರೀತಿ ಜಾಗ ಇಲ್ಲ ಎಂದು ಹೇಳುತ್ತಾರೆ. ಸದರಿ ಜಾಗದಲ್ಲಿ ವಾದಿಯು ಒಂದು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವ ಎ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಮನುಕುಮಾರ್ ಮತ್ತು ವಾದಿ ಕ್ರಯಕ್ಕೆ ಪಡೆದಿರುವ ಜಾಗ ಇದೆ ಎಂದರೆ ಸರಿ. ಮನುಕುಮಾರ್ ಕ್ರಯಕ್ಕೆ ತೆಗೆದುಕೊಂಡ ಜಾಗದಲ್ಲಿ ಹಾಲಿ ವಾದಿ ಮತ್ತು ವಾದಿ

ಹೆಂಡತಿ ಇದ್ದಾರೆ ಎಂದರೆ ಸರಿ. ಮನುಕುಮಾರ್ ಗೆ ಸೇರಿದ ಜಾಗವನ್ನು ವಾದಿಯ ಹೆಂಡತಿ ಉಮಾ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ದಾವ ಎ ಅನುಸೂಚಿ ಸ್ವತ್ತಿನ ಪಶ್ಚಿಮಕ್ಕೆ ಪಂಚಾಯತ ರಸ್ತೆ ಇದೆ ಎಂದರೆ ಸಾಕ್ಷಿಯು ರಸ್ತೆ ಇದೆ ಟಾರ್ ರೋಡ್ ಅಲ್ಲ ಎಂದು ಹೇಳುತ್ತಾರೆ. ದಾವ ಎ ಅನುಸೂಚಿ ಸ್ವತ್ತಿನ ಉತ್ತರ ದಿಕ್ಕಿಗೆ ಹಾಲಮ್ಮ ಕೋಂ ಡಾ.ಜಟ್ಟನಾಯ್ಕ ರವರ ನಿವೇಶನ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಅದೇ ರೀತಿ ದಾವ ಎ ಅನುಸೂಚಿ ಸ್ವತ್ತಿನ ದಕ್ಷಿಣ ದಿಕ್ಕಿಗೆ ಬಚ್ಚಣ್ಣ ರವರ ನಿವೇಶನ ಮತ್ತು ಮನೆ ಇದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ ಮಧ್ಯೆ **10** ಇಂಟು **20** ಅಡಿ ಜಾಗದ ವಿಚಾರವಾಗಿ ವಿವಾದ ಇದೆ ಎಂದರೆ ಸರಿ.

ದಾವ ಬಿ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಯ ಸ್ವತ್ತು ಇದೆ ಎಂದರೆ ಸರಿ. ದಾವ ಬಿ ಅನುಸೂಚಿ ಸ್ವತ್ತಿನ ಪಶ್ಚಿಮ ಮತ್ತು ಉತ್ತರಕ್ಕೆ **40** ಇಂಟು **80** ಅಡಿ ಜಾಗದ ಉಳಿದ ಭಾಗ ಬರುತ್ತದೆ ಎಂದರೆ ಸರಿ. ಅದೇ ರೀತಿ ದಾವ ಬಿ ಅನುಸೂಚಿ ಸ್ವತ್ತಿನ ಬಚ್ಚಣ್ಣ ನವರ ನಿವೇಶನ ಮತ್ತು ಮನೆ ಇದೆ ಎಂದರೆ ಸರಿ. ದಾವ ಎ ಅನುಸೂಚಿ ಸ್ವತ್ತಿಗೆ ವಾದಿ ಒಬ್ಬನೇ ಮಾಲೀಕನು ಎಂದರೆ ಸಾಕ್ಷಿಯು ಸದರಿ ಸ್ವತ್ತು ವಾದಿ ಒಬ್ಬನಿಗೆ ಸೇರಿರುವುದಿಲ್ಲ ಮೂರು ಜನಕ್ಕೆ ಸೇರಿರುತ್ತದೆ ಎಂದು ಹೇಳುತ್ತಾರೆ. ದಾವ ಬಿ ಅನುಸೂಚಿ ಸ್ವತ್ತಿನಲ್ಲಿ ಪ್ರತಿವಾದಿಯ ದಿಃ**17.07.2022** ರಂದು ಒಂದು ಶೀಟಿನ ಮನೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಯು ತಾನು ವಾಸ ಇರುವ ಜಾಗದ ನೇರಕ್ಕೆ ಹಾಕಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಶೀಟ್ ಹಾಕಿದ ವಿಚಾರವಾಗಿ ವಾದಿ ಮತ್ತು ಪ್ರತಿವಾದಿಯ ಮಧ್ಯೆ ಈ ವ್ಯಾಜ್ಯ ಆಗಿದೆ ಎಂದರೆ ಸರಿ. ಪ್ರತಿವಾದಿಯು ದಾವ ಬಿ ಅನುಸೂಚಿ ಸ್ವತ್ತನ್ನು ಅಕ್ರಮವಾಗಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಗಂಡ ಮಂಗಳೂರಿನಲ್ಲಿ ಒಂದು ಲಾಡ್ಜ ನಲ್ಲಿ ಕೆಲಸ ಮಾಡಿಕೊಂಡು ಇದ್ದಾರೆ ಎಂದರೆ ಸರಿ. ನನ್ನ ಗಂಡ ಕಳೆದ **4-5** ವರುಷಗಳಿಂದ ಹೃದಯ ಸಂಬಂಧಿ ಖಾಯಿಲೆಯಿಂದ ಬಳಲುತ್ತಿದ್ದಾರೆ ಎಂದರೆ ಸರಿ. ನನ್ನ ಗಂಡನ ಆಸ್ಪತ್ರೆ ಖರ್ಚನ್ನು ಪ್ರತಿವಾದಿ ಪ್ರತಿವಾದಿಯ ತಂದೆ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ಅವರು ನೋಡಿಕೊಳ್ಳುತ್ತಾರೆ, ನನ್ನ ಗಂಡನ ಅಣ್ಣ ನೋಡಿಕೊಳ್ಳುತ್ತಾರೆ ಮತ್ತು ಲಾಡ್ಜ ನ ಮಾಲೀಕರು ನೋಡಿಕೊಳ್ಳುತ್ತಾರೆ ಎಂದು ಹೇಳುತ್ತಾರೆ. ನಾನು ಒಂದು ಹೆಣ್ಣು ಮಗಳನ್ನು ದತ್ತಕ ಪಡೆದಿರುತ್ತೇನೆ ಎಂದರೆ ಸರಿ. ಸದರಿ ಹೆಣ್ಣು ಮಗಳನ್ನು ಪ್ರತಿವಾದಿಯೇ ನಮಗೆ ಬೇರೆ ಕಡೆಯಿಂದ ದತ್ತಕ ಕೊಡಿಸಿರುತ್ತಾರೆ ಎಂದರೆ ಸರಿ. ವಾದಿಯು ಅನ್ಯಜಾತಿಯ ಹೆಣ್ಣು ಮಗಳನ್ನು ಮದುವೆಯಾಗಿರುತ್ತಾರೆ ಎಂದರೆ ಇರಬಹುದು. ನನ್ನ ಮತ್ತು ವಾದಿಯ ಮದ್ಯ ಸಂಬಂಧ ಸರಿಯಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವ ಎ ಮತ್ತು ಬಿ ಅನುಸೂಚಿ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವ ಎ ಮತ್ತು ಬಿ ಅನುಸೂಚಿ ಸ್ವತ್ತುಗಳಿಗೆ ವಾದಿಯೇ ಮಾಲೀಕರು ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡಬೇಕೆಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.